# V Semester B.Com. Examination, Nov./Dec. 2018
## (2016-17 and Onwards) (CBCS) (F+R)
## COMMERCE
## 5.3 : Income Tax – I

Time : 3 Hours　　　　　　　　　　　　　　　　　　　　　　Max. Marks : 70

***Instruction** : Answer should be written either in **English** or in **Kannada**.*

### SECTION – A

1. Answer **any five** sub-questions. **Each** sub-question carries **two** marks. **(5×2=10)**
   a) Who is a specified employee ?
   b) Who is a person ?
   c) Mention any two income tax authorities.
   d) What is total income ?
   e) What is un-realised rent ?
   f) State the meaning of the term 'Deemed Assessee'.
   g) What is pre-construction interest ?

### SECTION – B

Answer **any three** questions. **Each** question carries **six** marks. **(3×6=18)**

2. Mr. Rajesh an employee of ABC Co. Ltd. Bangalore, retired on 31st May 2017 after completing 28 years of service. His monthly pension was fixed at Rs. 20,000. He commuted 60% of pension on 1st Jan. 2018 and received a sum of Rs. 5,40,000 as commuted pension. Calculate his taxable commuted and uncommuted pension for the assessment year 2018-19.
3. Mr. Satish an employee of PQR Co. Ltd. Mysore, has left India for the first time on 16th July 2017 for higher training in U.K. Calculate his residential status for the assessment year 2018-19.
4. Briefly explain any three cannon of taxation.
5. From the following information compute net annual value of house property of Mr. Ganesh for the A.Y. 2018-19.

| | |
|---|---|
| Fair rental value | Rs. 1,80,000 p.a. |
| Standard rent | Rs. 1,62 ,000 p.a. |
| Rent received | Rs. 16,500 p.m. |
| Unrealised rent for the year 2017-18 | Rs. 24,750 |
| Loss due to vacancy | Rs. 16,500 |

Municipal tax paid by owners Rs. 21,600 being 10% of municipal value.

P.T.O.

6. State whether the following are agricultural or non agricultural income.
   a) Income from supply of water for agricultural purpose.
   b) Profit on sale of agricultural land.
   c) Income from farm house situated in agricultural land.
   d) Interest received from loan given to farmers for agricultural purpose.
   e) Income from land used for agricultural purpose by the owner.
   f) Salary received by an employee of a company engaged in agricultural operations.

## SECTION – C

Answer **any three** questions. **Each** question carries **fourteen** marks. **(3×14=42)**

7. Sri Ram submits the following particulars of his income for the year 2017-18.

| | **Amount (Rs.)** |
|---|---|
| a) Income from house property in Hasana received in Paris | 6,50,000 |
| b) Salary income from an Indian employer received in Newyork for two months | 75,000 p.m. |
| c) Income from business in Mumbai received in Bangalore (40% remitted to Nepal) | 12,50,000 |
| d) Dividend from foreign company received in Chennai | 1,80,000 |
| e) Income from business in Hongkong and the business is controlled from Tumkur (25% received in Tumkur) | 15,00,000 |
| f) Interest on post office S.B. A/c in Bangalore (account is held in joint names) | 17,500 |
| g) Income from agricultural land in Sri Lanka (50% received in India) | 2,05,000 |
| h) Share from H.U.F. | 60,000 |
| i) Royalty received in India for the services rendered in Japan | 6,00,000 |
| j) Interest earned on U.S. Government Bonds received in London | 1,75,000 |
| k) Interest on SBI deposits received in Bhutan | 7,080 |
| l) Past untaxed foreign income brought to India | 6,10,000 |
| m) Interest on housing loan given to Mr. X for construction of house in Bangladesh received in Bangalore | 65,020 |

Calculate his Gross Total Income for the A.Y. 2018-19 if he is
a) Ordinary resident
b) Not-ordinary resident
c) Non-resident.

8. Mr. X, a physically handicapped person working in ABC Company Ltd. Bangalore has furnished the following details of his income for the year 2017-18. Compute his income from salary for the A.Y. 2018-19.
   a) Basic salary Rs. 40,000 p.m.
   b) Dearness allowance enters into retirement benefits Rs. 24,000 p.m.
   c) Fixed percentage of commission on sales Rs. 1,500 p.m.
   d) Bonus Rs. 65,000.
   e) HRA Rs. 12,500 p.m. (Rent paid Rs. 10,600 p.m.)
   f) Transport allowance Rs. 4,000 p.m.
   g) Reimbursement of medical expenses Rs. 17,500 for treatment taken in private hospital.
   h) Management contribution and own contribution to RPF is 15% of salary.
   i) Interest credited to RPF is Rs. 11,000 at 11% p.a.
   j) Professional tax paid by employee is Rs. 400 p.m.
   k) He is provided with more than 1.6 liter capacity car by the company for official use. All the expenses including salary of the driver are met by the company.
   l) Children education allowance Rs. 600 p.m. per child for two children and children hostel allowance Rs. 1,000 p.m. for two children.

9. Mr. Praveen is owner of a house property in Mysore. The construction of the house was completed on 18th July 2016. He took a loan of Rs. 8,75,000 from Canara Bank on 1st Nov. 2014 at 11% p.a. The loan was outstanding during the year 2017-18 to the extent of Rs. 5,00,000. From the following information calculate his income from house property for the A.Y. 2018-19.
   a) Municipal value Rs. 1,44,000 p.a.
   b) Fair rental value Rs. 1,80,000 p.a.
   c) Standard rent Rs. 1,20,000 p.a.
   d) Rent received per month Rs. 18,000.
   e) Municipal tax paid is 10% of M.V. (25% paid by tenent).
   f) Loss due to vacancy Rs. 27,000.
   g) Unrealised rent for the year 2017-18 Rs. 10,000.
   h) Unrealised rent of 2016-17 was recovered during 2017-18 Rs. 16,000.

10. Mr. Prakash is the owner of following houses in Bangalore and the particulars of which are relating to previous year 2017-18.

| **Particulars** | **House A** Rs. | **House B** Rs. | **House C** Rs. |
|---|---|---|---|
| 1) Municipal value | 1,20,000 | 1,32,000 | 1,44,000 |
| 2) Fair rental value | 1,50,000 | 1,60,000 | 1,75,000 |
| 3) Standard rent | 1,44,000 | 1,50,000 | 1,60,000 |

| | | | |
|---|---|---|---|
| 4) Nature of use | Let out for Residence | Let out for Business | Self occupied for Residence |
| 5) Rent received (p.m.) | 15,000 | 18,000 | – |
| 6) Municipal tax paid by owner : | | | |
| a) For the year 2016-17 | 6,000 | 6,600 | – |
| b) For the year 2017-18 | 12,000 | 13,200 | 14,400 |
| 7) Cost of repairs | 18,000 | 12,000 | – |
| 8) Interest on loan for construction | 45,000 | 60,000 | 2,25,000 |
| 9) Unrealised for the year 2017-18 | 12,000 | 18,000 | – |
| 10) Vacancy period (month) | 2 | 2 | – |
| 11) Year of completion | 2014 | 2013 | 2011 |

Compute the Taxable Income from House Property for the A.Y. 2018-19.

11. From the following information calculate the income from salary of Mr. Anand for the A.Y. 2018-19.
    1) Basic salary Rs. 40,000 p.m.
    2) Dearness allowance 60% of basic forming part of salary.
    3) Commission Rs. 18,000.
    4) Bonus Rs. 60,000.
    5) Employer and employee's contribution to SPF is 15% of salary.
    6) Interest credited to SPF is Rs. 12,000 at 10% p.a.
    7) CCA Rs. 500 p.m.
    8) Medical allowance Rs. 800 p.m.
    9) He is provided with a rent free furnished house by the employer for which his employer paid a rent of Rs. 5,000 p.m. to the owner of the house. Cost of furniture is Rs. 1,20,000.
    10) He is also provided with a car less than 1.6 litre capacity by the employer both for personal and official use. All the expenses of the car including salary of the driver are paid by the employer.
    11) Free telephone at his residence by the employer valued at Rs. 12,500.
    12) Professional tax paid by him Rs. 450 p.m.
    13) Gift voucher worth Rs. 12,500 were issued by the employer.

## ಕನ್ನಡ ಆವೃತ್ತಿ

## ವಿಭಾಗ – ಎ

1. ಯಾವುದಾದರೂ ಐದು ಉಪ-ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಉಪ-ಪ್ರಶ್ನೆ ಎರಡು ಅಂಕಗಳು. (5×2=10)
    a) ನಿಶ್ಚಿತ ನೌಕರ ಎಂದರೆ ಯಾರು ?
    b) ವ್ಯಕ್ತಿ ಎಂದರೆ ಯಾರು ?
    c) ಯಾವುದಾದರೂ ಎರಡು ಆದಾಯ ತೆರಿಗೆ ಅಧಿಕಾರಿಗಳನ್ನು ತಿಳಿಸಿ.
    d) ನಿವ್ವಳ ಆದಾಯ ಎಂದರೇನು ?

e) ವಸೂಲಾಗದ ಬಾಡಿಗೆ ಎಂದರೇನು?

f) 'ಪರಿಗಣಿಸುವ ತೆರಿಗೆದಾರ' ಎಂದರೆ ಯಾರು ?

g) ಕಟ್ಟಡ ನಿರ್ಮಾಣದ ಮುಂಚಿನ ಬಡ್ಡಿ ಎಂದರೇನು ?

## ವಿಭಾಗ – ಬಿ

ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಆರು ಅಂಕಗಳು. **(3×6=18)**

2. ABC ಕಂಪನಿ ಲಿಮಿಟೆಡ್ ಬೆಂಗಳೂರು, ಇದರ ನೌಕರನಾದ ಶ್ರೀ ರಾಜೇಶ್ ಎಂಬುವರು ದಿನಾಂಕ 31-5-2017 ರಂದು ನಿವೃತ್ತಿ ಹೊಂದಿದ್ದಾರೆ. ಈ ಕಂಪನಿಯಲ್ಲಿ ಇವರು 28 ವರ್ಷ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರ ಮಾಸಿಕ ಪಿಂಚಣಿಯನ್ನು ರೂ. 20,000 ನಿಗದಿಪಡಿಸಲಾಗಿದೆ. ದಿನಾಂಕ 1-1-2018 ರಂದು ಇವರು ಶೇಕಡ 60 ರಷ್ಟು ಪಿಂಚಣಿಯನ್ನು ಪರಿವರ್ತಿಸಿ ರೂ. 5,40,000 ಗಳನ್ನು ಪಡೆದಿದ್ದಾರೆ. ತೆರಿಗೆ ವರ್ಷ 2018-19 ಕ್ಕೆ ಸಂಬಂಧಿಸಿದಂತೆ ತೆರಿಗೆಗೆ ಒಳಪಡುವ ಇವರ ಪರಿವರ್ತಿತ ಹಾಗೂ ಅಪರಿವರ್ತಿತ ಪಿಂಚಣಿ ಹಣವನ್ನು ಕಂಡುಹಿಡಿಯಿರಿ.

3. PQR ಕಂಪನಿ ನಿಯಮಿತ ಮೈಸೂರಿನ ನೌಕರರಾದ ಶ್ರೀ ಸತೀಶ್‌ರವರು ಮೊದಲನೆ ಬಾರಿಗೆ ದಿನಾಂಕ 16-7-2017 ರಂದು ಭಾರತ ದೇಶವನ್ನು ಬಿಟ್ಟು U.K ದೇಶಕ್ಕೆ ಹೆಚ್ಚಿನ ತರಬೇತಿಗೆ ಹೋದರು. ಇವರ ನಿವಾಸಿ ಸ್ಥಿತಿಯನ್ನು ತೆರಿಗೆ ವರ್ಷ 2018-19 ನಿರ್ಧರಿಸಿ.

4. ಯಾವುದಾದರೂ ಮೂರು ತೆರಿಗೆ ಸಿದ್ಧಾಂತಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

5. ಈ ಕೆಳಗಿನ ವಿವರಗಳಿಂದ ತೆರಿಗೆ ವರ್ಷ 2018-19 ಕ್ಕೆ ಶ್ರೀ ಗಣೇಶರವರ ಮನೆ ಆಸ್ತಿಯ ಒಟ್ಟು ವಾರ್ಷಿಕ ಮೌಲ್ಯವನ್ನು ಕಂಡುಹಿಡಿಯಿರಿ.

   ನ್ಯಾಯವಾದ ಬಾಡಿಗೆ ರೂ. 1,80,000 ವರ್ಷಕ್ಕೆ.

   ನಿರ್ದಿಷ್ಟಮಾನ ಬಾಡಿಗೆ ರೂ. 1,62,000 ವರ್ಷಕ್ಕೆ.

   ಬಾಡಿಗೆ ಮೌಲ್ಯ ತಿಂಗಳಿಗೆ ರೂ. 16,500.

   2017-18 ರ ವಸೂಲಾಗದ ಬಾಡಿಗೆ ರೂ. 24,750.

   ಖಾಲಿ ಮನೆಯ ನಷ್ಟ ರೂ. 16,500.

   ಮಾಲಿಕರು ಕಟ್ಟಿದ ಪುರಸಭಾ ತೆರಿಗೆ ರೂ. 21,600 ಇದು ಶೇಕಡ 10 ಪುರಸಭಾ ಮೌಲ್ಯಕ್ಕೆ ಸಮನಾಗಿದೆ.

6. ಈ ಕೆಳಗಿನ ಆದಾಯಗಳು ವ್ಯವಸಾಯ ಆದಾಯವೋ ಅಥವಾ ಅಲ್ಲವೋ ತಿಳಿಸಿರಿ.

   a) ವ್ಯವಸಾಯಕ್ಕಾಗಿ ಸರಬರಾಜು ಮಾಡಿದ ನೀರಿನಿಂದ ಬಂದ ಆದಾಯ.

   b) ಕೃಷಿ ಭೂಮಿ ಮಾರಾಟದಿಂದ ಬಂದ ಲಾಭ.

   c) ಕೃಷಿ ಭೂಮಿಯಲ್ಲಿರುವ ಕೃಷಿ ಮನೆಯಿಂದ ಬಂದ ಆದಾಯ.

   d) ರೈತನಿಗೆ ಕೊಟ್ಟ ಸಾಲದಿಂದ ಬಂದ ಬಡ್ಡಿ.

   e) ಕೃಷಿಗಾಗಿ ಮಾಲಿಕನು ಭೂಮಿಯನ್ನು ಉಪಯೋಗಿಸಿದರಿಂದ ಬಂದ ಆದಾಯ.

   f) ವ್ಯವಸಾಯ ಸಂಸ್ಥೆಯ ನೌಕರನು ಪಡೆದ ಸಂಬಳ.

## ವಿಭಾಗ – ಸಿ

ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹದಿನಾಲ್ಕು ಅಂಕಗಳು. **(3×14=42)**

7. 2017-18 ನೇ ಹಣಕಾಸು ವರ್ಷದಲ್ಲಿ ಶ್ರೀರಾಮ್ ಅವರ ಆದಾಯ ಈ ಕೆಳಕಂಡಂತಿದೆ.

a) ಹಾಸನದ ಮನೆಯಿಂದ ಬಂದ ಆದಾಯ ರೂ. 6,50,000 ವನ್ನು ಪ್ಯಾರಿಸ್‌ನಲ್ಲಿ ಸ್ವೀಕರಿಸಲಾಗಿದೆ.

b) ನ್ಯೂಯಾರ್ಕ್‌ನಲ್ಲಿ ಭಾರತೀಯ ಮಾಲಿಕನಿಂದ ಪಡೆದ ಸಂಬಳದ ಆದಾಯ ತಿಂಗಳಿಗೆ ರೂ. 75,000 ಎರಡು ತಿಂಗಳಿಗಾಗಿ.

c) ಮುಂಬಯಿನಲ್ಲಿರುವ ವ್ಯವಹಾರದಿಂದ ಬಂದ ಆದಾಯ ರೂ. 12,50,000 (ಇದರಲ್ಲಿ ಶೇಕಡ 40ರಷ್ಟು ನೇಪಾಳ ದೇಶಕ್ಕೆ ವರ್ಗಾಯಿಸಲಾಗಿದೆ) ಬೆಂಗಳೂರಿನಲ್ಲಿ ಸ್ವೀಕರಿಸಲಾಗಿದೆ.

d) ವಿದೇಶಿ ಕಂಪನಿಯಿಂದ ಬಂದ ಲಾಭಾಂಶ ಹಣವನ್ನು ಚೆನ್ನೈನಲ್ಲಿ ಸ್ವೀಕರಿಸಿದ್ದು ರೂ. 1,80,000.

e) ಹಾಂಗ್‌ಕಾಂಗ್ ದೇಶದಲ್ಲಿರುವ ವ್ಯವಹಾರದಿಂದ ಬಂದ ಆದಾಯ ರೂ. 15,00,000 (ಇದರಲ್ಲಿ ಶೇಕಡ 25 ರಷ್ಟು ಆದಾಯವನ್ನು ತುಮಕೂರಿನಲ್ಲಿ ಸ್ವೀಕರಿಸಲಾಗಿದೆ). ಈ ವ್ಯವಹಾರವನ್ನು ತುಮಕೂರಿನಿಂದ ನಿರ್ವಹಣೆ ಮಾಡಲಾಗಿದೆ.

f) ಅಂಚೆ ಕಛೇರಿಯ S.B. ಖಾತೆಯಿಂದ ಬಂದ ಬಡ್ಡಿಯನ್ನು ಬೆಂಗಳೂರಿನಲ್ಲಿ ಸ್ವೀಕರಿಸಿದ್ದು (ಈ ಖಾತೆಯ ಜಂಟಿ ಹೆಸರಿನಲ್ಲಿ ಇದೆ) ರೂ. 17,500.

g) ಶ್ರೀಲಂಕ ದೇಶದಲ್ಲಿರುವ ಕೃಷಿ ಭೂಮಿಯಿಂದ ಬಂದ ಆದಾಯ ರೂ. 2,05,000 (ಇದರಲ್ಲಿ ಶೇಕಡ 50 ರಷ್ಟು ಆದಾಯವನ್ನು ಭಾರತ ದೇಶದಲ್ಲಿ ಸ್ವೀಕರಿಸಿದೆ).

h) ಹಿ.ಅ.ಕುಂ. ದಿಂದ ಬಂದ ಪಾಲು ಹಣ ರೂ. 60,000.

i) ಜಪಾನ್ ದೇಶದಲ್ಲಿ ಸಲ್ಲಿಸಿರುವ ಸೇವೆಗಾಗಿ ಭಾರತದಲ್ಲಿ ಸ್ವೀಕರಿಸಿದ ರಾಜಧನ ರೂ. 6,00,000.

j) U.S. ಸರಕಾರದ ಸಾಲಪತ್ರದ ಮೇಲೆ ಬಂದ ಬಡ್ಡಿಯನ್ನು ಲಂಡನ್ ದೇಶದಲ್ಲಿ ಸ್ವೀಕರಿಸಿದೆ ರೂ. 1,75,000.

k) SBI ಠೇವಣಿ ಮೇಲೆ ಬಂದ ಬಡ್ಡಿ ಹಣವನ್ನು ಭೂತಾನ್ ದೇಶದಲ್ಲಿ ಸ್ವೀಕರಿಸಿದೆ ರೂ. 7,080.

l) ತೆರಿಗೆಗೆ ಒಳಪಡದ ಹಳೆಯ ವಿದೇಶಿ ಆದಾಯವನ್ನು ಭಾರತ ದೇಶಕ್ಕೆ ತಂದಿದ್ದು ರೂ. 6,10,000.

m) ಬಾಂಗ್ಲದೇಶದಲ್ಲಿ ಮನೆಯನ್ನು ಕಟ್ಟಲು X ಅವರಿಗೆ ಕೊಟ್ಟ ಸಾಲದ ಮೇಲೆ ಬಂದ ಬಡ್ಡಿ ಹಣವನ್ನು ಬೆಂಗಳೂರಿನಲ್ಲಿ ಸ್ವೀಕರಿಸಿದ್ದು ರೂ. 65,020.

ತೆರಿಗೆ ವರ್ಷ 2018-19 ಕ್ಕೆ ಸಲ್ಲುವ ಅವರ ಒಟ್ಟು ಆದಾಯವನ್ನು ಕಂಡುಹಿಡಿಯಿರಿ. ಒಂದು ಸಂದರ್ಭದಲ್ಲಿ ಅವರು

a) ಸಾಧಾರಣ ನಿವಾಸಿಯಾಗಿದ್ದಾಗ

b) ಸಾಧಾರಣವಲ್ಲದ ನಿವಾಸಿಯಾಗಿದ್ದಾಗ

c) ಅನಿವಾಸಿ ಭಾರತೀಯರಾಗಿದ್ದಾಗ.

8. X ಅವರು ಅಂಗವಿಕಲ ವ್ಯಕ್ತಿಯಾಗಿದ್ದು ABC ಕಂಪನಿ ಬೆಂಗಳೂರಿನಲ್ಲಿ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಅವರ ಆದಾಯ ವಿಷಯಗಳು ಆರ್ಥಿಕ ವರ್ಷ 2017-18 ರಲ್ಲಿ ಈ ಕೆಳಕಂಡಂತಿದೆ.
   a) ಮೂಲ ವೇತನ ತಿಂಗಳಿಗೆ ರೂ. 40,000.
   b) ತುಟ್ಟಿ ಭತ್ಯೆ ರೂ. 24,000 ಮಾಸಿಕ (ನಿವೃತ್ತಿ ಸಂಬಳದ ಭಾಗವಾಗಿದೆ).
   c) ನಿಶ್ಚಿತ ದಲ್ಲಾಳಿ ಮಾರಾಟದ ಮೇಲೆ ರೂ. 1,500 ಮಾಸಿಕ.
   d) ಬೋನಸ್ ರೂ. 65,000.
   e) ಮನೆ ಬಾಡಿಗೆ ಭತ್ಯೆ ರೂ. 12,500 ಮಾಸಿಕ (ಬಾಡಿಗೆ ಕಟ್ಟಿದ್ದು ರೂ. 10,600 ಮಾಸಿಕ)
   f) ಸಂಚಾರ ಭತ್ಯೆ ಮಾಸಿಕ ರೂ. 4,000.
   g) ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಪಡೆದ ವೈದ್ಯಕೀಯ ವೆಚ್ಚದ ಮರು ಪಾವತಿ ರೂ. 17,500.
   h) ವೇತನದ ಶೇಕಡ 15 ರಷ್ಟು ಹಣವನ್ನು ಇವರು ಹಾಗೂ ಇವರ ಮಾಲಿಕರು ಕ್ರಮವಾಗಿ RPF ಖಾತೆಗೆ ಪಾವತಿಸಿದ್ದಾರೆ.
   i) ಶೇ. 11 ರಂತೆ ರೂ. 11,000 ಬಡ್ಡಿಯನ್ನು RPF ಖಾತೆಗೆ ಜಮವಾಗಿದೆ.
   j) ನೌಕರನು ಕಟ್ಟಿದ ವೃತ್ತಿ ತೆರಿಗೆ ಮಾಸಿಕ ರೂ. 400.
   k) 1.6 ಲೀ. ಸಾಮರ್ಥ್ಯಕ್ಕೆ ಮೇಲ್ಪಟ್ಟ ಕಾರನ್ನು ಕಛೇರಿಯ ಕೆಲಸಕ್ಕೆ ಇವರಿಗೆ ಕೊಡಲಾಗಿದೆ. ಈ ಕಾರಿನ ಖರ್ಚು ಚಾಲಕನ ಸಂಬಳ ಸಹಿತ ಕಂಪನಿಯು ಕೊಟ್ಟಿದೆ.
   l) ಮಕ್ಕಳ ವಿದ್ಯಾಭ್ಯಾಸ ಭತ್ಯೆ ಇಬ್ಬರು ಮಕ್ಕಳಿಗೆ ತಲಾ ರೂ. 600 ಮಾಸಿಕದಂತೆ ಹಾಗೂ ಮಕ್ಕಳ ವಿದ್ಯಾರ್ಥಿ ನಿಲಯದ ಭತ್ಯೆ ಮಾಸಿಕ ರೂ. 1,000 ದಂತೆ ಇಬ್ಬರು ಮಕ್ಕಳಿಗೆ ಕೊಡಲಾಗಿದೆ.

   ತೆರಿಗೆ ವರ್ಷ 2018-19 ಕ್ಕೆ ಅನ್ವಯವಾಗುವಂತೆ ಇವರ ವೇತನ ಆದಾಯವನ್ನು ಕಂಡುಹಿಡಿಯಿರಿ.

9. ಮೈಸೂರಿನಲ್ಲಿ ಪ್ರವೀಣ್ ಎಂಬವರು ಒಂದು ಮನೆಯ ಮಾಲಿಕರಾಗಿರುತ್ತಾರೆ. ಈ ಮನೆಯ ನಿರ್ಮಾಣವನ್ನು ದಿನಾಂಕ 18-7-2016 ರಂದು ಪೂರ್ಣಗೊಳಿಸಿದ್ದಾರೆ. ಈ ಮನೆಯನ್ನು ಕಟ್ಟಲು ದಿನಾಂಕ 1-11-2014 ರಂದು ಶೇಕಡಾ 11 ರಂತೆ ವರ್ಷಕ್ಕೆ ರೂ. 8,75,000 ಹಣವನ್ನು ಸಾಲದ ರೂಪದಲ್ಲಿ ಕೆನರಾ ಬ್ಯಾಂಕಿನಿಂದ ಪಡೆದಿದ್ದಾರೆ. ಮರು ಪಾವತಿಸ ಬೇಕಾದ ಸಾಲದ ಮೊತ್ತ 2017-18 ರಲ್ಲಿ ರೂ. 5,00,000 ದಷ್ಟು ಇತ್ತು. ಈ ಕೆಳಗಿನ ವಿಷಯಗಳಿಂದ ತೆರಿಗೆ ವರ್ಷ 2018-19 ಅನ್ವಯಿಸುವಂತೆ ಇವರ ಮನೆಯ ಆದಾಯವನ್ನು ಕಂಡುಹಿಡಿಯಿರಿ.
   a) ಪುರಸಭೆ ಮೌಲ್ಯ ರೂ. 1,44,,000 ವರ್ಷಕ್ಕೆ.
   b) ನ್ಯಾಯವಾದ ಬಾಡಿಗೆ ಮೌಲ್ಯ ರೂ. 1,80,000 ವರ್ಷಕ್ಕೆ.
   c) ನಿರ್ದಿಷ್ಟಮಾನ ಬಾಡಿಗೆ ರೂ. 1,20,000 ವರ್ಷಕ್ಕೆ.
   d) ಬಾಡಿಗೆ ಬಂದಿದ್ದು ಮಾಸಿಕ ರೂ. 18,000.
   e) ಕಟ್ಟಿದ ಪುರಸಭ ತೆರಿಗೆ ಶೇಕಡ 10 ರಷ್ಟು ಪುರಸಭೆಯ ಮೌಲ್ಯದ ಮೇಲೆ (ಶೇಕಡ 25 ಬಾಡಿಗೆದರ ಕಟ್ಟಿದ್ದಾನೆ).
   f) ಖಾಲಿ ಮನೆಯ ಅವಧಿಯ ನಷ್ಟ ರೂ. 27,000.
   g) 2017-18 ರ ವಸೂಲಾಗದೆಯಿರುವ ಬಾಡಿಗೆ ರೂ. 10,000.
   h) 2016-17 ರ ವಸೂಲಾಗದೆಯಿರುವ ಬಾಡಿಗೆಯನ್ನು 2017-18 ರಲ್ಲಿ ಪಡೆದಿದ್ದು ರೂ. 16,000

10. ಬೆಂಗಳೂರಿನಲ್ಲಿ ಶ್ರೀ ಪ್ರಕಾಶ್ ಎಂಬುವರು ಈ ಕೆಳಗಿನ ಮನೆಗಳ ಮಾಲಿಕರಾಗಿದ್ದಾರೆ. ಈ ಕೆಳಗೆ ಕೊಟ್ಟಿರುವ ವಿಷಯಗಳು ಆರ್ಥಿಕ ವರ್ಷ 2017-18 ಕ್ಕೆ ಸಂಬಂಧಪಟ್ಟಿರುತ್ತವೆ.

| ವಿಷಯಗಳು | ಮನೆ A ರೂ. | ಮನೆ B ರೂ. | ಮನೆ C ರೂ. |
|---|---|---|---|
| 1) ಪುರಸಭ ಮೌಲ್ಯ | 1,20,000 | 1,32,000 | 1,44,000 |
| 2) ನ್ಯಾಯವಾದ ಬಾಡಿಗೆ ಮೌಲ್ಯ | 1,50,000 | 1,60,000 | 1,75,000 |
| 3) ನಿರ್ದಿಷ್ಟಮಾನ ಬಾಡಿಗೆ | 1,44,000 | 1,50,000 | 1,60,000 |
| 4) ಮನೆ ಉಪಯೋಗಿಸಿದ ರೀತಿ | ಬಾಡಿಗೆ ವಾಸಕ್ಕೆ | ಬಾಡಿಗೆ ವ್ಯವಹಾರಕ್ಕೆ | ಸ್ವಂತ ವಾಸಕ್ಕೆ |
| 5) ಬಾಡಿಗೆ ಬಂದಿದ್ದು (ಮಾಸಿಕ) | 15,000 | 18,000 | – |
| 6) ಮಾಲಿಕನು ಕಟ್ಟಿದ ಪುರಸಭ ತೆರಿಗೆ : | | | |
| a) 2016-17 ವರ್ಷದ | 6,000 | 6,600 | – |
| b) 2017-18 ವರ್ಷದ | 12,000 | 13,200 | 14,400 |
| 7) ದುರಸ್ತಿ ಖರ್ಚು | 18,000 | 12,000 | – |
| 8) ಮನೆ ಕಟ್ಟಲು ಮಾಡಿದ ಸಾಲದ ಮೇಲಿನ ಬಡ್ಡಿ | 45,000 | 60,000 | 2,25,000 |
| 9) 2017-18 ರ ವಸೂಲಿ ಮಾಡಲಾಗದ ಬಾಡಿಗೆ | 12,000 | 18,000 | – |
| 10) ಖಾಲಿ ಮನೆಯ ಅವಧಿ (ತಿಂಗಳಲ್ಲಿ) | 2 | 2 | – |
| 11) ಮನೆಯನ್ನು ಕಟ್ಟಿದ ವರ್ಷ | 2014 | 2013 | 2011 |

ತೆರಿಗೆ ವರ್ಷ 2018-19 ಕ್ಕೆ ಅನ್ವಯವಾಗುವಂತೆ ಇವರ ಮನೆ ಆದಾಯವನ್ನು ಕಂಡುಹಿಡಿಯಿರಿ.

11. ಈ ಕೆಳಗಿನ ವಿಷಯಗಳಿಂದ ಶ್ರೀ ಆನಂದ್ ಅವರ ಸಂಬಳ ಆದಾಯವನ್ನು ತೆರಿಗೆ ವರ್ಷ 2018-19 ಕ್ಕೆ ಅನ್ವಯವಾಗುವಂತೆ ಕಂಡುಹಿಡಿಯಿರಿ.

1) ಮೂಲ ವೇತನ ಮಾಸಿಕ ರೂ. 40,000.
2) ತುಟ್ಟಿ ಭತ್ಯೆ ಶೇಕಡ 60 (ಸಂಬಳದ ಭಾಗವಾಗಿದೆ).
3) ದಲ್ಲಾಳಿ ರೂ. 18,000.
4) ಬೋನಸ್ ರೂ. 60,000.
5) ವೇತನದ ಶೇಕಡ 15 ರಷ್ಟು ಹಣವನ್ನು ಶ್ರೀ ಆನಂದ್ ಹಾಗೂ ಇವರ ಮಾಲಿಕರು ಕ್ರಮವಾಗಿ SPF ಖಾತೆಗೆ ಪಾವತಿಸಿದ್ದಾರೆ.
6) ಶೇಕಡಾ 10 ರಂತೆ ರೂ. 12,000 ಬಡ್ಡಿಯನ್ನು SPF ಖಾತೆಗೆ ಜಮವಾಗಿರುತ್ತದೆ.
7) CCA ಮಾಸಿಕ ರೂ. 500.
8) ವೈದ್ಯಕೀಯ ಭತ್ಯೆ ಮಾಸಿಕ ರೂ. 800.
9) ಬಾಡಿಗೆ ರಹಿತ ಮನೆಯನ್ನು ಇವರ ಮಾಲಿಕರು ನೀಡಿದ್ದು, ಈ ಮನೆಗೆ ಮಾಲಿಕರು ರೂ. 5,000 ಮಾಸಿಕ ಹಣವನ್ನು ಈ ಮನೆಯ ಯಜಮಾನನಿಗೆ ಕೊಟ್ಟಿದ್ದಾರೆ. ಪೀಠೋಪಕರಣದ ವೆಚ್ಚ ರೂ. 1,20,000.
10) 1.6 ಲೀ. ಕೆಳಗಿನ ಸಾಮರ್ಥ್ಯ ಹೊಂದಿದ ಕಾರ್ ಅನ್ನು ಇವರ ಮಾಲಿಕರು ಕೊಟ್ಟಿರುತ್ತಾರೆ. ಈ ಕಾರ್ ಅನ್ನು ಶ್ರೀ ಆನಂದ್ ಅವರು ಕಛೇರಿ ಹಾಗೂ ಸ್ವಂತ ಕೆಲಸಕ್ಕೆ ಉಪಯೋಗಿಸುತ್ತಿದ್ದಾರೆ. ಈ ಕಾರಿನ ಒಟ್ಟು ಖರ್ಚು ಚಾಲಕನ ಸಂಬಳ ಸಹಿತ ಇವರ ಮಾಲಿಕರು ಕೊಟ್ಟಿರುತ್ತಾರೆ.
11) ಮನೆಯಲ್ಲಿ ಉಚಿತವಾಗಿ ದೂರವಾಣಿಯನ್ನು ಉಪಯೋಗಿಸಲು ಮಾಲಿಕರು ಮಾಡಿದ ಖರ್ಚು ರೂ. 12,500.
12) ಶ್ರೀ ಆನಂದ್ ಅವರು ಕಟ್ಟಿದ ವೃತ್ತಿ ತೆರಿಗೆ ರೂ. 450 ಮಾಸಿಕ.
13) ಇವರ ಮಾಲಿಕರು ಶ್ರೀ ಆನಂದ್‌ಗೆ ಕೊಟ್ಟಿರುವ ಕೊಡುಗೆಯ ಪತ್ರಗಳು ರೂ. 12,500.